ಅಸಲು ದಾವಾ ಸಂಖ್ಯೆ - 32/2025
ಪಿಡಬ್ಲ್ಯು - 01
ದಿನಾಂಕಃ 06-12-2025
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಡಿ ಕೆ ಬಿ ವಕೀಲರಿಂದಃ</u>**

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಚಿಲ್ಲೂರಬಡ್ನಿ ಗ್ರಾಮದ ಸರ್ವೆ ನಂ. 48/1+2 ರ ಉತಾರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 8 ಎಂದು ಗುರುತಿಸಲಾಯಿತು.

ಚಿಲ್ಲೂರಬಡ್ನಿ ಗ್ರಾಮ ಪಂಚಾಯತಿಯ ಆಸ್ತಿ ನಂ. 32/ಬಿ ರ ಉತಾರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 9 ಎಂದು ಗುರುತಿಸಲಾಯಿತು.

ಸಾಕ್ಷಿಯ ಗಂಡನ ಮರಣ ಪ್ರಮಾಣ ಪತ್ರದ ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ನೋಡಿ ಅದರ ದೃಢಿಕೃತ ನಕಲನ್ನು ನಿಪಿ- 10 ಎಂದು ಗುರುತಿಸಲಾಯಿತು.

ವಾದಿಯ ಕುಟುಂಬದ ಜೀವಂತ ಸದಸ್ಯರ ದೃಢಿಕರಣ ಪತ್ರದ ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ನೋಡಿ ಅದರ ದೃಢಿಕೃತ ನಕಲನ್ನು ನಿಪಿ- 11 ಎಂದು ಗುರುತಿಸಲಾಯಿತು.

2 ನೇ ವಾದಿಯ ಮೂಲ ಆಧಾರಕಾರ್ಡನೊಂದಿಗೆ ತಾಳೆ ಮಾಡಿ ನೋಡಿ ಅದರ ದೃಢಿಕೃತ ನಕಲನ್ನು ನಿಪಿ- 12 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ</u> ಪ್ರತಿವಾದಿಯರು ಮತ್ತು ಅವರ ಪರ ವಕೀಲರನ್ನು ಕರೆಯಿಸಲಾಗಿ ಅವರು ಗೆಏರು ಹಾಜರಿದ್ದು ಮತ್ತು ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**<u>ಮರು ವಿಚಾರಣೆಃ ಇಲ್ಲ.</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು